

# ‘ಉದ್ಯೋಗ ಸಿಗದಿದ್ದರೆ ಅದು ಶಿಕ್ಷಣವೇ ಅಲ್ಲ ಎಂದರ್ಥವಲ್ಲ’

‘ಈಗಿನ ದಿನಮಾನಗಳಲ್ಲಿ ಉದ್ಯೋಗ ದೊರಕಿಸಿಕೊಡದ ಶಿಕ್ಷಣ, ಅದು ಶಿಕ್ಷಣವೇ ಅಲ್ಲ ಎಂಬ ಮನೋಭಾವ ಬಹುತೇಕರಲ್ಲಿದೆ. ಆದರೆ, ಅದು ತಪ್ಪು. ಉದ್ಯೋಗ ಎನ್ನುವುದು ಶಿಕ್ಷಣದ ಉಪ ಉತ್ಪನ್ನದಂತೆ. ಆದರೆ, ನಮ್ಮ ಜೀವನಶೈಲಿ, ಜೀವನಕ್ರಮ, ಚಿಂತನೆ ಮತ್ತು ನಮ್ಮನ್ನು ನಾವು ನಾಗರಿಕನನ್ನಾಗಿ ನೋಡಿಕೊಳ್ಳುವ ವಿಧಾನ ಎಲ್ಲವೂ ನಮಗೆ ಸಿಗುವುದು ಶಿಕ್ಷಣದಿಂದ’ ಎಂದು ಅಭಿಪ್ರಾಯಪಡುತ್ತಾರೆ ಶಿಕ್ಷಣ ತಜ್ಞ ನಿರಂಜನಾರಾಧ್ಯ ವಿ.ಪಿ.

‘ದಕ್ಷಿಣ ಭಾರತದಲ್ಲಿ ಕೇರಳ ಮತ್ತು ತಮಿಳುನಾಡು ರಾಜ್ಯಕ್ಕೆ ಹೋಲಿಸಿದರೆ, ಕರ್ನಾಟಕದಲ್ಲಿ ಉನ್ನತ ಶಿಕ್ಷಣಕ್ಕೆ ದಾಖಲಾಗುವವರ ಸಂಖ್ಯೆ ಕಡಿಮೆ ಇದೆ. ಉನ್ನತ ಶಿಕ್ಷಣ ಪಡೆದರೂ ಉದ್ಯೋಗ ಸಿಗದಿದ್ದರೆ ಹೇಗೆ ಎಂಬ ತಾಕಲಾಟ, ಉನ್ನತ ಶಿಕ್ಷಣ ಓದಲು ಇರುವ ಆರ್ಥಿಕ ಅಡಚಣೆಗಳೂ ಇದಕ್ಕೆ ಕಾರಣವಾಗಿರಬಹುದು’ ಎಂದು ಅವರು ಹೇಳುತ್ತಾರೆ.

ಶಿಕ್ಷಣ ನೀಡುವ ವಿಧಾನದಲ್ಲಿಯೂ ಬದಲಾವಣೆಯಾಗಬೇಕಿದೆ ಎನ್ನುವ ಅವರು, ‘ವೃತ್ತಿ ಶಿಕ್ಷಣವೇ ಬೇರೆ, ಕೌಶಲ ಶಿಕ್ಷಣವೇ ಬೇರೆ ಎಂದು ಗಾಂಧೀಜಿ ಹೇಳುತ್ತಿದ್ದರು. ಶಾಲಾ ಹಂತದಿಂದಲೇ ವರ್ಕ್ ಎಜುಕೇಷನ್ ಪ್ರಾರಂಭಿಸುವ ಅಗತ್ಯ ಇದೆ’ ಎಂದು ಸಲಹೆ ನೀಡುತ್ತಾರೆ.



‘ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿದರೆ ಮತ್ತೆ ಮುಂದುವರಿಸುವುದು ಕಷ್ಟವಾಗುತ್ತದೆ. ಏಕೆಂದರೆ, ಕೆಲಸದ ಜಾಗದಲ್ಲಿ ಹೆಚ್ಚು ಗಮನ ನೀಡಬೇಕಾಗುತ್ತದೆ. ಅಲ್ಲದೆ, ಈಗ ಸಂಜೆ ಕಾಲೇಜುಗಳ ಸಂಖ್ಯೆಯೂ ಕಡಿಮೆ ಇದೆ’ ಎಂದು ಅವರು ಹೇಳುತ್ತಾರೆ.

‘ವಿಶ್ವವಿದ್ಯಾಲಯಗಳಲ್ಲಿ ಸಾವಿರಾರು ಹುದ್ದೆಗಳು ಭರ್ತಿಯಾಗಿಯೇ ಇಲ್ಲ. ಅಲ್ಲದೆ, ಖಾಸಗಿ ಸಂಸ್ಥೆಗಳು ಮತ್ತು ಸ್ನಾತಕೋತ್ತರ ಕೇಂದ್ರಗಳಲ್ಲಿ ಪ್ರವೇಶಕ್ಕೆ ದುಬಾರಿ ಶುಲ್ಕವಿದೆ. ಹೀಗಾಗಿ, ಸರ್ಕಾರವು ವಿಶ್ವವಿದ್ಯಾಲಯಗಳಲ್ಲಿ ಮತ್ತು ಸರ್ಕಾರಿ ಕಾಲೇಜುಗಳ ಸ್ನಾತಕೋತ್ತರ ಕೇಂದ್ರಗಳಲ್ಲಿ ಅಗತ್ಯ ಮೂಲಸೌಲಭ್ಯ ಕೊಟ್ಟು, ಗುಣಮಟ್ಟದ ಶಿಕ್ಷಣ ನೀಡುವ ವ್ಯವಸ್ಥೆಯನ್ನು ಹೆಚ್ಚು ಆಸ್ಥೆಯಿಂದ ಮಾಡಬೇಕಿದೆ. ಜೊತೆಗೆ, ಕಡಿಮೆ ದುಡ್ಡಿನಲ್ಲಿ ಗುಣಮಟ್ಟದ ಶಿಕ್ಷಣವನ್ನು ಇಂತಹ ಸಂಸ್ಥೆಗಳಲ್ಲಿ ನಾವು ಪಡೆದುಕೊಳ್ಳಲು ಸಾಧ್ಯ ಎಂದು ವಿದ್ಯಾರ್ಥಿಗಳಲ್ಲಿ ವಿಶ್ವಾಸ ಮೂಡಿದರೆ ಉನ್ನತ ಶಿಕ್ಷಣ ಪಡೆಯುವ ಸಂಖ್ಯೆ ಹೆಚ್ಚಬಹುದು’ ಎಂದು ನಿರಂಜನಾರಾಧ್ಯ ಹೇಳುತ್ತಾರೆ.

ಮುಖ್ಯವಾಗಿ, ಉನ್ನತ ಶಿಕ್ಷಣ ಮುಂದುವರಿಸಲು ಆಗದಿರುವವರ ಮುಂದಿರುವ ಪ್ರಮುಖ ಅಡಚಣೆ ಅಂದರೆ ಹಣಕಾಸಿಗೆ ಸಂಬಂಧಿಸಿದ್ದು. ಖಾಸಗಿ ಕಾಲೇಜುಗಳ ಶುಲ್ಕ ದಿನದಿಂದ ದಿನಕ್ಕೆ ಏರುತ್ತಿರುವುದು, ಹಾಸ್ಟೆಲ್ ಅಥವಾ ಪಿಜಿ ಖರ್ಚುಗಳು, ಶಿಕ್ಷಣ ಸಾಲಗಳ ಭಾರದಂತಹ ಸಮಸ್ಯೆಗಳು ಯುವಸಮೂಹವನ್ನು ವಿಶ್ವವಿದ್ಯಾಲಯ ಮೆಟ್ಟಿಲು ಹತ್ತಲು ಅಡ್ಡಿ ಮಾಡುತ್ತಿವೆ. ಈ ಸಮಸ್ಯೆಗಳ ಜೊತೆಗೆ ಕುಟುಂಬದ ಜವಾಬ್ದಾರಿಯ ಒತ್ತಡವೂ ಸೇರಿಕೊಂಡರೆ, ‘ಡಿಗ್ರಿ ಅಥವಾ ಡಬಲ್ ಡಿಗ್ರಿ ಎಂದುಕೊಂಡು ಓದುತ್ತಾ ಹೋಗುವುದಕ್ಕಿಂತ ಕೆಲಸಕ್ಕೆ ಹೋಗಿ ಮನೆಯವರ ಹೊರೆ ಕಡಿಮೆ ಮಾಡಬೇಕು’ ಎಂಬ ಮನೋಭಾವವೇ ಹೆಚ್ಚು ಬಲ ಪಡೆಯುತ್ತದೆ. ಅದರಲ್ಲಿಯೂ, ಅನೇಕ ಕುಟುಂಬಗಳಲ್ಲಿ ಹಿರಿಯ ಮಗ ಅಥವಾ ಮಗಳ ಮೇಲೆಯೇ ಇಂತಹ ಆರ್ಥಿಕ ಒತ್ತಡಗಳು ಹೆಚ್ಚುತ್ತಿರುವುದು ಸಾಮಾನ್ಯವಾಗಿದೆ.

## ಉನ್ನತ ಶಿಕ್ಷಣ ನೋಂದಣಿ- ಪ್ರಮಾಣವೇ ಕಡಿಮೆ!

ಕರ್ನಾಟಕದಲ್ಲಿ ಪ್ರೌಢಶಿಕ್ಷಣ ಹಂತದಲ್ಲಿ ಶಾಲೆ ತೊರೆಯುವವರ ಸಂಖ್ಯೆ ಹೆಚ್ಚುತ್ತಿದೆ ಎಂದು ಏಕೀಕೃತ ಜಿಲ್ಲಾವಾರು ಶೈಕ್ಷಣಿಕ ಮಾಹಿತಿ ವ್ಯವಸ್ಥೆ (ಯುಡಿಐಎಸ್‌ಇ ಪ್ಲಸ್) ವರದಿ ಹೇಳುತ್ತದೆ. ಈ ವರದಿ ಪ್ರಕಾರ, ನಮ್ಮ ರಾಜ್ಯದಲ್ಲಿ ಪ್ರೌಢಶಿಕ್ಷಣದ ಹಂತದಲ್ಲಿ

## ‘ಪಾರ್ಟ್‌ಟೈಮ್ ಕೆಲಸ ಮಾಡುವವರೇ ಹೆಚ್ಚು’

‘ಗಿಗ್ ಕೆಲಸಕ್ಕೆ ಎಲ್ಲಿ ಪ್ರಾಮುಖ್ಯತೆ ಹೆಚ್ಚಾಗಿದೆಯೋ ಅಲ್ಲಿ ಯುವಕರು ಈ ಕೆಲಸಗಳತ್ತ ಹೊರಳಿ ನೋಡುತ್ತಿದ್ದಾರೆ. ಆದರೆ, ಪೂರ್ಣಪ್ರಮಾಣದಲ್ಲಿ ಈ ವೃತ್ತಿಗಳಲ್ಲಿ ತೊಡಗಿಸಿಕೊಳ್ಳುವುದಕ್ಕಿಂತ ಅರೆಕಾಲಿಕವಾಗಿ ಕೆಲಸ ಮಾಡುತ್ತಿರುವವರೇ ಹೆಚ್ಚು’ ಎನ್ನುತ್ತಾರೆ ಯುನೈಟೆಡ್ ಫುಡ್ ಡೆಲಿವರಿ ಪಾರ್ಟ್ನರ್ಸ್ ಒಕ್ಕೂಟದ ಅಧ್ಯಕ್ಷ ವಿನಯ್ ಸಾರಥಿ.

‘ಹಾಸ್ಟೆಲ್‌ಗಳಲ್ಲಿ, ಪಿ.ಜಿ.ಗಳಲ್ಲಿ ಇದ್ದವರು ಓಲಾ, ಉಬರ್ ಅಥವಾ ಫುಡ್ ಡೆಲಿವರಿ ಕೆಲಸಗಳನ್ನು ಮಾಡಿಕೊಂಡಿರುತ್ತಾರೆ. ಬೆಂಗಳೂರಿನಲ್ಲಿ ಫುಲ್‌ಟೈಮ್ ಗಿಗ್ ಎಕಾನಮಿಯಲ್ಲಿ ಇರುವವರ ಸಂಖ್ಯೆ ಹೆಚ್ಚಿರಬಹುದು. ಆದರೆ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಬೆಳಗಾವಿಯಂತಹ ಕಡೆಗಳಲ್ಲಿ ಅರೆಕಾಲಿಕವಾಗಿ ಈ ಕೆಲಸಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಇನ್ನು ಕೆಲವರು ವಾರಾಂತ್ಯಗಳಲ್ಲಿ ಕೆಲಸ ಮಾಡುತ್ತಾರೆ. ಆದರೆ, ಈ ಮಾದರಿಯ ವೃತ್ತಿಗಳು ಜನಪ್ರಿಯವಾದ ನಂತರ ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆ ಕಡಿಮೆ ಆಗಿದೆ ಎನ್ನುವುದಕ್ಕೆ ಯಾವುದೇ ಆಧಾರಗಳಿಲ್ಲ’ ಎಂಬುದು ವಿನಯ್ ಸಾರಥಿಯವರ ಅಭಿಪ್ರಾಯ.